# ಅದಾರ್ ಲಸಿಕೆ ಕನಸಿನ ಆಧಾರ!

■ ಪ್ರವೀಣ ಕುಲಕರ್ಣಿ

ಅದಾರ್ ಪೂನಾವಾಲಾ – ಭಾರತದಿಂದ ಹಿಡಿದು ಅಮೆರಿಕದವರೆಗೆ ಜಗತ್ತಿನ ಎಲ್ಲ ದೇಶಗಳಲ್ಲಿ ಈಗ ಬಹು ಚರ್ಚಿತವಾಗುತ್ತಿರುವ ಹೆಸರು. ಕೋವಿಡ್‌ನ ಎರಡನೆಯ ಅಲೆ ಬಲವಾಗಿ ಬೀಸುತ್ತಿರುವ ಈ ಸಂದರ್ಭದಲ್ಲಿ ಎಲ್ಲ ದೇಶಗಳೂ ಆಸೆ ಕಂಗಳಿಂದ ಎದುರು ನೋಡುತ್ತಿರುವುದು ಕೊರೊನಾ ಸೋಂಕು ಪ್ರತಿರೋಧಕ ಲಸಿಕೆಗಾಗಿ. ಅದರಲ್ಲೂ ಭಾರತದಲ್ಲಿ ಲಸಿಕೆಗಾಗಿ ಹಾಹಾಕಾರವೇ ಎದ್ದಿದೆ. ಜಗತ್ತಿನಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಲಸಿಕೆಯನ್ನು ತಯಾರಿಸುತ್ತಿರುವ ಸಂಸ್ಥೆಗಳಲ್ಲಿ ಪೂನಾವಾಲಾ ಅವರ ‘ಸೆರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ’ ಸಹ ಒಂದಾಗಿದೆ.

ಇಂಗ್ಲೆಂಡ್‌ನ ವೆಸ್ಟ್‌ಮಿನಿಸ್ಟರ್ ಯೂನಿವರ್ಸಿಟಿಯಲ್ಲಿ ಬ್ಯುಜಿನೆಸ್ ಮ್ಯಾನೇಜ್‌ಮೆಂಟ್ ಪದವಿ ಪಡೆದಿರುವ ಅದಾರ್, ಸೆರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಮುಖ್ಯ ಕಾರ್ಯನಿರ್ವಹಣಾಧಿಕಾರಿ. ಈ ಸಂಸ್ಥೆಯನ್ನು ಅದಾರ್ ಅವರ ತಂದೆ ಸೈರಸ್ 56 ವರ್ಷಗಳ ಹಿಂದೆ ಸ್ಥಾಪಿಸಿದ್ದಾರೆ.

ಇಂಗ್ಲೆಂಡ್‌ನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದ ಕೋವಿಡ್ ಲಸಿಕೆ ಆಸ್ಟ್ರಾಜೆನಿಕಾವನ್ನು ಅದಾರ್ ಅವರ ಸಂಸ್ಥೆ ಈಗ ತಯಾರಿಸಿ ಕೊಡುತ್ತಿದೆ. ತುಂಬಾ ಹಿಂದಿನಿಂದಲೂ ಜಗತ್ತಿನ ಅತಿದೊಡ್ಡ ಲಸಿಕೆ ಉತ್ಪಾದಕ ಸಂಸ್ಥೆ ಎನಿಸಿಕೊಂಡಿದೆ ಸೆರಂ. ವಾರ್ಷಿಕವಾಗಿ 150 ಕೋಟಿ ಡೋಸ್‌ಗಳಷ್ಟು ವಿವಿಧ ಲಸಿಕೆಗಳನ್ನು ಅದು ತಯಾರಿಸುತ್ತದೆ. ಪುಣೆಯಲ್ಲಿ ಈ ಸಂಸ್ಥೆಯ ಮುಖ್ಯ ಘಟಕವಿದೆ. ನೆದರ್ಲೆಂಡ್ಸ್ ಹಾಗೂ ಜೆಕ್ ರಿಪಬ್ಲಿಕ್‌ನಲ್ಲಿ ಚಿಕ್ಕ ಘಟಕಗಳಿವೆ. ಸುಮಾರು ಏಳು ಸಾವಿರ ಜನರಿಗೆ ಅದಾರ್ ಉದ್ಯೋಗದಾತ. ಭಾರತದಲ್ಲಿ ತಯಾರಾಗುವ ಲಸಿಕೆಯಲ್ಲಿ ಶೇ 80ರಷ್ಟು ಪ್ರಮಾಣ ರಫ್ತಾಗುತ್ತದೆ. ಭಾರತಕ್ಕೂ ಹೆಚ್ಚಿನ ಲಸಿಕೆ ತಯಾರಿಸಿಕೊಡುವ ಒತ್ತಡ ಈಗ ಅದರ ಮೇಲಿದೆ.

ಜೀವರಕ್ಷಕ ಎನಿಸಿದ ಲಸಿಕೆ ತಯಾರಿಸುತ್ತಿರುವ ಅದಾರ್‌ಗೆ ಭಾರತದಲ್ಲಿ ಜೀವ ಬೆದರಿಕೆ ಕರೆಗಳು ಬಂದಿವೆಯಂತೆ! ಆದ್ದರಿಂದಲೇ ಅವರೀಗ ಲಂಡನ್ ನಿವಾಸಿ. ಜಗತ್ತಿನಲ್ಲೇ ಅತ್ಯಂತ ದುಬಾರಿ ಮನೆಗಳ ಪ್ರದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾದ ವೆಸ್ಟ್‌ಮಿನಿಸ್ಟರ್ ಸಿಟಿಯ (ಆ ಪ್ರದೇಶ ಗ್ರೇಟರ್ ಲಂಡನ್‌ನ ಭಾಗ) ‘ಮೇಫೇರ್’ನಲ್ಲಿ ಅವರು ಮನೆ ಬಾಡಿಗೆ ಪಡೆದಿದ್ದಾರೆ. ಪೋಲೆಂಡ್‌ನ ಉದ್ಯಮಿ ಡೋಮಿನಿಕಾ ಕುಲ್‌ಝಿಕ್ ಅವರ ಒಡೆತನದ ಈ ಮನೆಗೆ ಪ್ರತೀ ವಾರದ ಬಾಡಿಗೆ (ಗಮನಿಸಿ, ತಿಂಗಳಿಗಲ್ಲ) ಬರಿ ₹ 50 ಲಕ್ಷ! ಚೀನಾದ ಬಹುದೊಡ್ಡ ಉದ್ಯಮಿ ಜಾನ್ ಕ್ವಾಡ್‌ವೆಲ್, ಅದಾರ್ ಅವರ ಪಕ್ಕದ ಮನೆಯ ನಿವಾಸಿ.

ಮೇಫೇರ್‌ನ ಈ ಮನೆ 25 ಸಾವಿರ ಚದರ ಅಡಿಗಳಷ್ಟು ವಿಸ್ತಾರವಾಗಿದೆ. ಬ್ರಿಟಿಷ್ ರಾಜಮನೆತನದ ಹಲವರು ಇದೇ ಪ್ರದೇಶದಲ್ಲಿ ಮನೆಗಳನ್ನು ಹೊಂದಿದ್ದಾರೆ. ಅಂತಹ ಪ್ರತಿಷ್ಠಿತ ಬಡಾವಣೆಯ ನಿವಾಸಿಯಾಗಿರುವ ಅದಾರ್, ಆದಷ್ಟು ಬೇಗ ಭಾರತಕ್ಕೆ ವಾಪಸ್ ಆಗುವ ಮಾತುಗಳನ್ನೂ ಆಡಿದ್ದಾರೆ.



ಭಾರತದಲ್ಲೂ ಅದಾರ್‌ಗೆ ಹಲವು ಐಷಾರಾಮಿ ಬಂಗಲೆಗಳಿವೆ. ಪಾರ್ಸಿ ಸಮುದಾಯದ ಅವರ ಕುಟುಂಬಕ್ಕೆ ‘ಪೂನಾವಾಲಾ’ ಎಂಬ ಅಡ್ಡಹೆಸರು ಸೇರಿಕೊಳ್ಳಲು ಕಾರಣ ಅವರ ಪ್ರಧಾನ ನೆಲೆ ಪುಣೆಯೇ ಆಗಿರುವುದು. ಪುಣೆಯಲ್ಲಿ ಅದಾರ್ ಅವರ ಕುಟುಂಬ ಯುರೋಪಿಯನ್ ಶೈಲಿಯ ಭವ್ಯವಾದ ಬಂಗಲೆಯನ್ನು ಹೊಂದಿದೆ.

ಪೂನಾವಾಲಾ ಕುಟುಂಬದ ಈ ಭವ್ಯ ಬಂಗಲೆಯ ಒಂದು ಬದಿ 40 ವರ್ಷಗಳಷ್ಟು ಹಳೆಯದಾದ ಸಿಂಗಲ್ ಇಂಜಿನ್ನಿನ ಸೆಸ್ನಾ ವಿಮಾನ ನಿಂತಿದ್ದರೆ, ಮತ್ತೊಂದು ಬದಿ ಕುದುರೆ ಲಾಯವಿದೆ (ಅದಾರ್ ಅವರ ತಾತ ಸೋಲಿ, ಕುದುರೆ ತಳಿಗಳನ್ನು ಅಭಿವೃದ್ಧಿಪಡಿಸುವ ವೃತ್ತಿಯಲ್ಲಿ ತೊಡಗಿದ್ದವರು). ಮನೆಯ ಒಳಹೊಕ್ಕರೆ ವಿಶಾಲವಾದ ಗೋಪುರ. ಅದರ ಚಾವಣಿ ಮೇಲೆ ಅಂದದ ಕಲಾಕೃತಿಗಳು. ಗೋಡೆಯ ಮೇಲೆ ತೂಗುಹಾಕಿದ ಬೆಳ್ಳಿಯ ಪ್ಲೇಟ್‌ಗಳನ್ನು ದಿಟ್ಟಿಸಿ ನೋಡಿದರೆ ಅದರ ಮೇಲೆ ಪಿಕಾಸೊ ಬಿಡಿಸಿದ ಚಿತ್ರಗಳು!

ಖಾಸಗಿ ಥಿಯೇಟರ್ ಹೊಂದಿರುವ ಅದಾರ್, ಸಿನಿಮಾ ಪ್ರೇಮಿ. ಮೂರು ಸಿಮ್ಯುಲೇಟರ್‌ಗಳು ಅವರ ಬಂಗಲೆಯಲ್ಲಿದ್ದು, ಅಲ್ಲಿರುವ ಫಾರ್ಮುಲಾ 1, ಬೋಯಿಂಗ್ 737 ಮತ್ತು ಯುದ್ಧ ವಿಮಾನದ ಸಿಮ್ಯುಲೇಟರ್‌ಗಳಲ್ಲಿ ಅವರು ಆಗಾಗ ಕಾಲ ಕಳೆಯುವುದುಂಟು.

ಪುಣೆಯಲ್ಲಿ ಇಂತಹ ಐಷಾರಾಮಿ ಬಂಗಲೆ ಇದ್ದರೂ ಮುಂಬೈಯಲ್ಲಿ 2015ರಲ್ಲಿ ಅವರು ಮನೆಯನ್ನು ಖರೀದಿಸಿದ್ದಾರೆ. ಆ ಮನೆ, ಒಂದೊಮ್ಮೆ ಅಮೆರಿಕದ ಕಾನ್ಸುಲೇಟ್ ಕಚೇರಿಯ ವಿಳಾಸವಾಗಿತ್ತು! ಆ್ಯಂಟಿಕ್ ಪೀಸ್‌ಗಳ ಮೇಲೆ ಅದಾರ್‌ಗೆ ಎಲ್ಲಿಲ್ಲದ ಮೋಹ. ಹಾಗೆಯೇ ತಮ್ಮ ಕಂಪನಿಗೆ ಅತ್ಯಂತ ಮುಂದುವರಿದ ತಂತ್ರಜ್ಞಾನವನ್ನು ತರುವಲ್ಲಿಯೂ ಅಷ್ಟೇ ಆಸಕ್ತಿ. 2005–06ರಲ್ಲಿ ಸೆರಂನ ನಿರ್ದೇಶಕ ಮಂಡಳಿಯ ಭಾಗವಾಗುವ ಅದಾರ್, ಐದೇ ವರ್ಷಗಳಲ್ಲಿ ಸಿಇಒ ಹುದ್ದೆಗೆ ಏರಿದವರು. ಕಳೆದೊಂದು ದಶಕದಲ್ಲಿ ಸಂಸ್ಥೆಯ ಸಾಮರ್ಥ್ಯವನ್ನು ಹೆಚ್ಚಿಸುತ್ತಲೇ ಬಂದವರು. ಕೋವಿಡ್‌ನ ಈ ಕಾಲಘಟ್ಟದಲ್ಲಂತೂ ಸೆರಂ ಜಗತ್ತಿನ ಕೇಂದ್ರಬಿಂದುಗಳಲ್ಲಿ ಒಂದಾಗಿದೆ. ಅದೇ ಕಾರಣಕ್ಕೆ ಇರಬೇಕು, ಚೀನಾದ ರೆಡ್ ಅಪೊಲೊ ಎಂಬ ಸಂಸ್ಥೆ ಅದರ ದತ್ತಾಂಶವನ್ನು ಕದಿಯಲು ಯತ್ನಿಸಿತ್ತು.

ಅದಾರ್, ಪಕ್ಕಾ ಬ್ಯುಜಿನೆಸ್ ಮ್ಯಾನ್ ಆಗಿದ್ದರೂ ಸಾಮಾಜಿಕ ಸೇವೆಯಲ್ಲಿ ಹಿಂದೆ ಬಿದ್ದವರಲ್ಲ. ಅವರ ಪೂನಾವಾಲಾ ಫೌಂಡೇಷನ್, ಮಹಾರಾಷ್ಟ್ರದ ಹಲವೆಡೆ ಸಾಮಾಜಿಕ ಸೌಲಭ್ಯಗಳನ್ನು ಕಲ್ಪಿಸುವ ಕೆಲಸ ಮಾಡುತ್ತಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65